Regd No B G. 155

Sri

15-9-1964

48 th Year
ನೇ ವರ್ಷ
★
Sri 'Satyavadi'
— DAILY —
MYSORE 4

ಸತ್ಯವಾದಿ

ಸ್ಥಾಪಕರು— ಅಂಮನೆ ಸಿರಸ್ತೆದಾರ್ ಎಂ ವಿ. ಸುಬ್ಬಂತಾಯರು [2 ನಪೈ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಸತ್ಯವಾದಿ ಪತ್ರಿಕೆಯನ್ನು ತಪ್ಪದೇ ಓದಿ
ದಿನ ಪತ್ರಿಕೆ ತಿಂಗಳಿಗೆ 40 ನಪೈ

Protect the Cow
ಗೋಸಂರಕ್ಷಣೆ ಮಾಡಿ

ಮುಟ್ಟಾಳತನ

ಜೋಹಸ್ಬರ್ಗ್— ಶ್ವೇತಂರನ್ನೂ ಪರ್ಣಂರನ್ನೂ ಪ್ರತ್ಯೇಕಿಸುವ ಅವಿವೇಕ ಮತ್ತು ನಿಷ್ಪ್ರಯೋಜಕ ವರ್ಣವಿಭೇದ ನೀತಿಯು ದಕ್ಷಿಣ ಆಫ್ರಿಕಾ ವೇವರ್ಡ್ ಸಂಕಾಂವು ಪೂರ್ವ ಕೇಪ್ ಪ್ರಾಂತ್ಯದ 70 ಮ್ಯಾಜಿಸ್ಟ್ರೇರಿಯಲ್ಲೂ ಜೆಲ್ಲೆಗಳಿಂದ 250000 ಆಫ್ರಿಕನರ್‌ರನ್ನು ರಿಸರ್ವುಸ್ ಸ್ಥಳಕ್ಕೆ ಸಾಗಿಸಲು ಪ್ರಯತ್ನಿಸಿತ್ತಿರುವುದು.

❋

ಸರ್ಕಾರದ ಮೇಲೆ ಆಕ್ಷೇಪಣೆ

ಶಿವಮೊಗ್ಗ— ಎಸ್. ಎಸ್ ಪಿ ನಾಯಕ ಶ್ರೀ ಗೋಪಾಲಗೌಡರು ಮಾಡಿದ ಭಾಷಣದಲ್ಲಿ— ರಾಜ್ಯದ ಆರ್ಥಿಕ ಸ್ಥಿತಿ ಉತ್ಕೃಷ್ಟವಾಗಿದೆಯೆಂದೂ, ಸರಕಾರವು ತಪ್ಪಾಗಿ ಹಣ ವಿನಿಯೋಗಿಸುತ್ತಿದೆಯೆಂದೂ ಹೇಳಿದರು : ಅನೇಕ ಪ್ರಾಜೆಕ್ಟುಗಳ ಕಳ್ಪನೆಯೇ ಫಲನೀಡುವವೆಲ್ಲವೆಂದೂ ಹೇಳಿದರು.

★

ನಿಂಕನ

ಬೆಂಗಳೂರು— ಎಲ್ ಇ ಸಿ ಕೇಂದ್ರ ಕಚೇರಿ ಜೀವನ ಪ್ರಕಾಶ್ ಮುಂದೆ ನಾಕಂರು ಉಪವಾಸ ಏರ್ಪಡಿಸಿರುವರು.

★

ಸಿಟಿ ಕೊಆಪರೇಟಿವ್ ಬ್ಯಾಂಕ್

ಮೈಸೂರು— ಸಿಟಿ ಕೊಆಪರೇಟಿವ್ ಬ್ಯಾಂಕಿನ ವಾರ್ಷಿಕ ಅಧಿವೇಶನವು ಈ ತಿಂಗಳ 27 ನೇ ತಾರೀಖು ಸಂಜೆ ಸದ್ವಿದ್ಯಾ ಪಾಠಶಾಲೆಯಲ್ಲಿ ನಡೆಯುವುದು

★

ನಾಳೆಯ ಪಂಚಾಂಗ

ದೈವಜ್ಞ ಶಿಖಾಮಣಿ
ಆಸ್ಥಾನ ಮಹಾವಿದ್ವಾ. ಧರ್ಮಾಧಿಕಾರಿ
ರಾಜಕಾರ್ಯಸಕ್ತ, ಜ್ಯೋತಿರ್ವಿದ್ವನ್ಮಣಿ
ಸಂದಶ್ಯಕೃಷ್ಣ ಜೋಯಿಸರವರಿಂದ
16 ದಶಮಿ ಪೂರ್ವಾಷಾಢ

ಉಪವಾಸ ಸತ್ಯಾಗ್ರಹ

ಭೂಪಾಲ— ಸರ್ಕಾರದ ಹೆವಿ ಎಲೆಕ್ಟ್ರಿಕಲ್ಸ್ ಕೆಲಸಗಾರರ ಕುಂದುಕೊರತೆ ಪರಿಹರಿಸಲು ಮಧ್ಯಪ್ರದೇಶ ಶಾಸನ ಸಭಾ ಸದಸ್ಯ ಮತ್ತು ಟೇಪ್ ಯೂನಿಯನ್ನು ಅಧ್ಯಕ್ಷ ಷಕೀರ ಅಲ್ಲೀ ಖಾರ್ ಅನಿರ್ದಿಷ್ಟ ಕಾಲದ ಉಪವಾಸ ಪ್ರಾರಂಭಿಸಿರುವರು

★

ಮುಂದುವರಿಯಿತು

ಮೈಸೂರು— 1965 ಫೆಬ್ರವರಿಯಲ್ಲಿ ನಡೆಯಲಿದ್ದ ಶ್ರವಣಬೆಳಗೊಳದ ಶ್ರೀ ಗೋಮಟೇಶ್ವರಸ್ವಾಮಿಯ ಮಹಾಮಸ್ತಕಾಭಿಷೇಕವು ಒಂದು ವರ್ಷ ಮುಂದುವರಿಸಿರುವ ವಿಚಾರವನ್ನು ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ಗೋಮಠಗಿರಿಯಲ್ಲಿ ತಿಳಿಸಿದರು

★

ಲೂಟಿ

ಬೆಂಗಳೂರು— ಗಜೇಂದ್ರಗಡ ಊರಿನಲ್ಲಿ ನೊನ್ತೆ ಅಂಗಡಿಗಳ ಲೂಟಿ ಸಂಬಂಧದಲ್ಲಿ 5 ಜನರು ಬಂಧಿಸಲ್ಪಟ್ಟಿದ್ದಾರೆ

★

ಆಹಾರ ಬೇಪ

ಚಂಡೀಘರ— ಒಟ್ಟಾರೆ ಧಾನ್ಯ ವ್ಯಾಪಾರವನ್ನು ಈಗಲೇ ವಹಿಸಿಕೊಳ್ಳಲು ಆತುರ ಪಡಬೇಕಾಗಿಲ್ಲವೆಂದು ಖಾಂಶದ ಆಹಾರ ಮಂತ್ರಿ ಶ್ರೀ ಸುಬ್ರಹ್ಮಣ್ಯಂ ಹೇಳಿದರು.

❋

ಆಶಾದಾಯಕ

ಕರಾಚಿ— ಭಾರತದ ಹೊಸ ನಾಯಕತ್ವದಲ್ಲಿ ಕಾಶ್ಮೀರ ಸಮಸ್ಯೆ ಬಗೆಹರಿಯಲು ಒಂದು ಮಾರ್ಗ ಕಾಣಲ್ಪಡಬಹುದೆಂದು ಅಧ್ಯಕ್ಷ ಆಯೂಬರು ಆಶಾದಾಯಕರಾಗಿದ್ದಾರೆ

ಅಟಗಾರನ ವರ್ಗಾವಣೆಗೆ 45 ಸಾವಿರ ಪೌಂಡು

ಪ್ಲಿಮತ್— ಸ್ವಾನ್ಸಿ ಟೌನ್ ಮತ್ತು ವೇಲ್ಸ್ ಆಟಗಾರ ಬೆರಿ ಜೋನ್ಸ್ ಪ್ಲಿಮತ್ ಅರ್ಗಾಯಿಲಿಗೆ 45 ಸಾವಿರ ಪೌಂಡುಗಳಿಗೆ ವರ್ಗಾಯಿಸಲ್ಪಟ್ಟನು

❋

ಅಮೇರಿಕಾ ನೆರವು ಕಪ್ಪಿತಿ

ಕರಾಚಿ— ಪಾಕಿಸ್ತಾನವು ಚೀನಾ ದೊಡನೆ ವಿಮಾನ ಒಪ್ಪಂದ ಮಾಡಿಕೊಂಡಿದ್ದರಿಂದ, ಡಾಕಾ ವಿಮಾನ ನಿಲ್ದಾಣದ ಅಭಿವೃದ್ಧಿಗೆ ಅಮೇರಿಕಾ ಮಾಡಿದ್ದ ವಾಗ್ದಾನವು ಹಿಂತೆಗೆದು ಹಿಂತೆಗೆದುಕೊಳ್ಳಲಾಗಿದೆಯೆಂದು ಹೇಳಲಾಗಿದೆ

ಮುಖ್ಯ ಮಂತ್ರಿಗಳ ಸುಡಿ

ಮೈಸೂರು— ಮೂರನೇ ಯೋಜನೆಯ ಮಿಕ್ಕ ಅವಧಿಯಲ್ಲಿ ಸರ್ಕಾರವು ಹೊಸ ರಸ್ತೆ ನಿರ್ಮಾಣಕ್ಕೆ ಖರ್ಚು ಮಾಡುವುದಿಲ್ಲವೆಂದು ಮುಖ್ಯ ಮಂತ್ರಿಗಳು ಹೇಳಿದರು

★

ಸೇತುವೆ ಉದ್ಘಾಟನೆ

ಮೈಸೂರು— ಲಕ್ಷ್ಮಣತೀರ್ಥದ ಮೇಲೆ ಉತ್ತನಹಳ್ಳಿ ಹತ್ತಿರ ಕಟ್ಟಿರುವ ಸೇತುವೆಯ ಉದ್ಘಾಟನೆಯನ್ನು ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ನೆರವೇರಿಸಿದರು — ಸಿದ್ದೇಗೌಡರು ನೆಹರೂ ಸ್ಮಾರಕ ನಿಧಿಗೆ ರೂ 50 ಕೊಟ್ಟರು

★

ಏಕಮನಸ್ಕವಾಗಿವೆ

ಕೊಲಂಬೊ— ಬರುವ ತಾಟಿಸ್ಥಿತಿ ಸಮ್ಮೇಳನದಲ್ಲಿ ಚರ್ಚೆಗೆ ಬರುವ ವಿಷಯದಲ್ಲಿ ಭಾರತ ಸಿಲೋನು ಏಕಮನಸ್ಕವಾಗಿವೆಯೆಂದು ಪ್ರಕಟವಾಗಿದೆ

ಭಾರತಕ್ಕೆ ಎಂಐಜಿ

ವಾಷಿಂಗ್ಟನ್— ಭಾರತವು ರಷ್ಯಾದಿಂದ 35 ಎಂಐಜಿ ಕೊಂಡಿದೆಯೆಂದು ನ್ಯೂಯಾರ್ಕ್ ಟೈಮ್ಸ್ ಪ್ರಕಟಿಸಿದೆ

—

ಚೀನಾ ಹೇಲೆ ಆಪಾದನೆ

ಮಾಸ್ಕೋ— ಅಕ್ರಮ ಅಫೀಮು ವ್ಯಾಪಾರದಿಂದ ಚೀನವು 500 ಮಿಲಿಯ ಡಾಲರು ದೊಂಕಿಸಿಕೊಂಡು ಅದನ್ನು ರಷ್ಯಾ ವಿರುದ್ಧ ಪ್ರಚಾರಕ್ಕೆ ವಿನಿಯೋಗಿಸುತ್ತಿದೆಯೆಂದು ಪ್ರಾವ್ದಾ ಪತ್ರಿಕೆ ತೋರಿಸಿದೆ.

....

ಭ್ರಷ್ಟಾಚಾರ ವಿರುದ್ಧ ಸಮ್ಮೇಳನ

ನವದೆಹಲಿ— ಅಖಿಲ ಭಾರತ ಭ್ರಷ್ಟಾಚಾರ ವಿರೋಧಿ ಸಮ್ಮೇಳನವು ತಾ|| 19 ನೇ ಶನಿವಾರ 20 ರಂದು ನಡೆಯುವುದು.

—

ಭೀಕರ ಮಳೆ — ಬಹು ಮಂದಿ ಸಾವು.

ಸಿಯೋಲು— ಇತ್ತೀಚೆಗೆ ಭೀಕರ ಮಳೆ ಹಾವಳಿಯಿಂದ 250 ಮಂದಿ ಮಡಿದರು ; ಮಣ್ಣಿನ ರಾಶಿಯಲ್ಲಿ ಬಿದ್ದ ಮನೆಗೋಡೆಗಳಲ್ಲಿ ಸಿಕ್ಕಿ, ಮತ್ತು ನೀರಿನಲ್ಲಿ ಮುಳುಗಿ ಸತ್ತಿರುವರು

❋

ವಾರಣಾಸಿ— ಆಹಾರ ಬೆಲೆ ಏರಿಕೆ ಮತ್ತು ಆಹಾರಾಭಾವ ತಪ್ಪಿಸಲು ಸರಕಾರದ ಅಶಕ್ತತೆ ' ಬಗ್ಗೆ ಜನತಾ ನಿರ್ದಾಕ್ಷಿಣ್ಯ ಶೇಖರಿಸಲು ಜನಸಂಘದ ಉತ್ತರ ಪ್ರದೇಶ ಶಾಖೆಯು ರಾಜ್ಯದ ಮಂತ್ರಿಗಳ ಕ್ಷೇತ್ರಗಳಲ್ಲೇ ಹಳವಳ ಹೂಡಿತು.

❋

ಬೊಂಬಾಯಿ— ಮಹಾರಾಷ್ಟ್ರದ ಒಟ್ಟಾರೆ ಆಹಾರಧಾನ್ಯ ವ್ಯಾಪಾರಿಗಳು ಸಿ ಫಾರಂ ಕೊಡುವದನ್ನು ಉಲ್ಲಂಘಿಸುವಂತೆ ಅವರ ಸಂಘದ ಸೂಚನೆಯಾಗಿದೆ

ವರ್ಣಾಶ್ರಮಧರ್ಮ

(ಮುಂದುವರಿದುದು)

ಜನಗಳ ವಿಂಗಡಣೆಯು ಎಲ್ಲಾ ಕಾಲಗಳಲ್ಲಿಯೂ ಇದೆ ; ಬೇರೆ ದೇಶಗಳಲ್ಲಿ ಮತ್ತು ಇತ್ತ ವರ್ಷಗಳಲ್ಲಿ ಜಾತಿಯು ಕೇವಲ ಹಣದಿಂದ ನಿರ್ಧಾರಿತವಾಗುತ್ತದೆ : ಆದರೆ ಭಾರತದ ಸನಾತನಧರ್ಮದಲ್ಲಿ ಭಗವಂತನೆ ಸೃಷ್ಟಿಮಾಡಲು, ತನ್ನ ತನ್ನ ಕರ್ಮ ಮತ್ತು ಗುಣದಿಂದ ಹುಟ್ಟುವಾಗಲೇ ಒಂದೊಂದು ಜಾತಿಯನ್ನು ಹೊಂದುತ್ತಾನೆ : ಬೇರೆ ದೇಶಗಳಲ್ಲಿ ಜನಗಳ ಜಾತಿಯನ್ನು ಕೇವಲ ಅವರ ಕೃತಿಯಿಂದಲೇ ತಿಳಿಯಬೇಕಲ್ಲದೇ ಅವರ ಹೆಸರಿನಿಂದ ತಿಳಿಯಲು ಸಾಧ್ಯವಿಲ್ಲ : ಆದರೆ ಭಾರತದಲ್ಲಿ ಹುಟ್ಟುಹೆಸರಿನಿಂದಲೇ ಜಾತಿಯು ತಿಳಿಯುತ್ತದೆ : ಇದೇ ಅವಿಂಡಂಲ್ಲಿರುವ ವ್ಯತ್ಯಾಸ ಸ್ವಾಮಿ ವಿವೇಕಾನಂದರು ಪ್ರಪಂಚದ ಅನೇಕ ದೇಶಗಳನ್ನು ಒಹಳ ದೂರವರೆಗೆ ಪ್ರವಾಸಮಾಡಿ ಬಂದನಂತರ ಹೀಗೆ ಹೇಳಿದ್ದಾರೆ- ' ಪ್ರಪಂಚದ ಎಲ್ಲಾ ಭಾಗದಲ್ಲಿಯೂ ನಾನು ಜಾತೀಯತೆಯನ್ನು ನೋಡಿದೆನು ; ಆದರೆ ಅವುಗಳ ಉದ್ದೇಶ ಮಾತ್ರ ಭಾರತದಂತೆ ಉತ್ಕೃಷ್ಟವಾದುದಲ್ಲ : ಈ ರೀತಿ ಜಾತಿಯು ಇಂಲೇದೇಕೆಂದಾದಮೇಲೆ ಅಥವಾ ಇಂದೇಇಂಲು ಸಾಧ್ಯವೇಯಿಲ್ಲವೆಂದಮೇಲೆ ಕೇವಲ ಪವಿತ್ರತೆ ಮತ್ತು ತ್ಯಾಗಕ್ಕೋಸ್ಕರವೇ ಏರ್ಪಟ್ಟಿರುವ ಹಿಂದೂ ಸಾಂಸ್ಥಾನದ ಜಾತಿಯು ಬೇರೆ ಕಡೆಯ ಐಶ್ವರ್ಯ ಮುಂತಾದುವುಗಳಿಂದ ಉಂಟಾಗುವ ಜಾತೀಯತೆಗಿಂತ ಸರ್ವೋತ್ಕೃಷ್ಟವಾದುದು ' ಶ್ರೀ ವಿವೇಕಾನಂದರ ಕುಂಭಕೋಣದ ಭಾಷಣ – ಭಾರತೀಯ ವಿವೇಕಾನಂದ).

ಪ್ರಾಚೀನ ಕಾಲದ ಭಾರತೀಯ ಚರಿತ್ರೆಯನ್ನು ವಿಮರ್ಶಿಸಿ ನೋಡಿದರೆ ಒಂದು ನಿಶ್ಚಯ ಸ್ಪಷ್ಟಪಡುತ್ತದೆ : ಯಾವ ಕಾಲದಲ್ಲಿ ಹಿಂದುಗಳು ಜಾತೀಯತೆಯು ಅಂದರೆ ವರ್ಣ ವರ್ಣ, ಆಶ್ರಮದ ಕಟ್ಟುಪಾಡನ್ನು ಚೆನ್ನಾಗಿ ಪಾಲಿಸುತ್ತಿದ್ದರೋ, ಆ ಕಾಲದಲ್ಲಿ ಅವರು ಅಭ್ಯುದಯವನ್ನು ಹೊಂದಿ ಯಾರಿಂದಲೂ ಪರಾಜಿತರಾಗದೇ ಅತ್ಯುಚ್ಚ ದೆಶೆಯನ್ನು ಹೊಂದಿದ್ದರು : ಏಕೆಂದರೆ ವರ್ಣಾಶ್ರಮದ ಪಾಲನೆಯಿಂದ ಹುಡುಗನು ಚಿಕ್ಕ ವಯಸ್ಸಿನಿಂದಲೇ ತನ್ನ ತಂದೆಯ ಉದ್ಯೋಗವನ್ನು ಕಲಿತು ಕೆಲವು ಕಾಲಾನಂತರ ತನ್ನ ಸ್ವಂತ ಬುದ್ಧಿಯನ್ನು ಉಪಯೋಗಿಸಿ ಹೆಚ್ಚು ಪ್ರಸಿದ್ಧ ಕಲಾಕಾರನಾಗುತ್ತಿದ್ದನು ; ಅವನ ಕೆಲಸವು ಪ್ರಪಂಚದ ಇತರ ಭಾಗಕ್ಕೆ ಮಹತ್ವಪೂರ್ಣ ಹಾಗೂ ಆಶ್ಚರ್ಯಕಾರಕವಾಗಿರುತ್ತಿದ್ದವು : ಜಾತಿಯನ್ನು ಹೊಂದಿದ್ದ ಹಿಂದೂಗಳೇನೇ ಅಜಂತ ವರ್ಣ, ಎಲ್ಲೋರದ ಕರ್ತೃಲೆಯ ಗುಹೆಗಳಲ್ಲಿ ತನ್ನ ಅತ್ಯುಚ್ಚವಾದ ಕಲಾಪ್ರದರ್ಶನ ಮಾಡಿದ್ದಾರೆ ; ಜಾತಿಯನ್ನು ಹೊಂದಿಲ್ಲದ ಹಿಂದೂಗಳೇನೇ ಪ್ರಪಂಚದ ಎಲ್ಲಾ ಅತ್ಯದ್ಭುತಗಳಲ್ಲಿ ಒಂದಾದ ' ತಾಜ್ ' ಮಂದಿರವನ್ನು ಕಟ್ಟಲು ಸಮರ್ಥರಾದರು : ದೆಹಲಿಯ ಕಬ್ಬಿಣದ ಸ್ತಂಭವನ್ನು ಕಟ್ಟಿ ಎಂಟು ಸಾವಿರ ವರ್ಷಗಳಾದರೂ ತುಕ್ಕು ಹಿಡಿಯದಿರುವ ಮತ್ತು ಈಗಿನ ವಿಜ್ಞಾನಿಗಳೂ ಕೂಡ ಯಾವ ಲೋಹವೆಂಬುದಾಗಿ ತಿಳಿಯದಿರುವ ಅದ್ಭುತವನ್ನು ಪ್ರದರ್ಶಿಸಿರುವವರು ಕೂಡ ಜಾತಿಗಳನ್ನು ಹೊಂದಿದ್ದ ಹಿಂದೂಗಳೇನೇ ಪ್ರಪಂಚದಲ್ಲಿ ಅದಕ್ಕೆ ಸಮಾನವಾದ ಗ್ರಂಥವನ್ನು ಯಾವ ಕಾಲದಲ್ಲಿಯೂ ಯಾರೂ ರಚಿಸಲು ಸಾಧ್ಯವಾಗದೇಯಿರುವ ' ಷಡ್‌ದರ್ಶನ ' ವೆಂಬ ಅರು ಮಹಾತತ್ವ ಶಾಸ್ತ್ರಗಳೂ ಕೂಡ ಸಕ್ಯವಾಗಿ ವರ್ಣಾಶ್ರಮಧರ್ಮವನ್ನು ಪಾಲಿಸುತ್ತಿದ್ದವರಿಂದಲೇ ಉದ್ಭೋದಿತವಾಗಿದ ಕ್ಕು: ಅದುದರಿಂದ ಯಾರು ವರ್ಣಾಶ್ರಮಧರ್ಮವನ್ನು, ಅದ್ವಿತೀಯವಾದ ಜ್ಞಾನಭಂಡಾರವನ್ನು ಒದಗಿಸುವ ಧರ್ಮವನ್ನು ತೆಗಳುತ್ತಾರೋ ಅವರು ಮೂಢರಾಗಿರಬೇಕು, ಇಲ್ಲವೇ ನೀಚರಾಗಿರಬೇಕು, ಅಥವಾ ಹಿಂದೂಧರ್ಮದ ಹೇಯ ಶತ್ರುವಾಗಿರಬೇಕು.

— ಮುಂದುವರಿಯುವುದು —

Truth ಪತ್ರಿಕೆಯಲ್ಲಿ ಪ್ರಕಟವಾಗಿದ್ದ ಶ್ರೀ ಪ್ರೊಫೆಸರ್ ವಿ೦ರೇಂದ್ರಕುಮಾರ್ ಸಿದ್ಧಾಂತಶಾಸ್ತ್ರಿ M. A., P. R. S. ರವರ ' ಪ್ರಾಚೀನ ಭಾರತೀಯ ಸಂಸ್ಕೃತಿ ' ಎಂಬ ಲೇಖನದಿಂದ ಸಂಗ್ರಹಿಸಲ್ಪಟ್ಟಿದೆ.

ಆ. ಸ. ಅಯ್ಯಂಗಾರ್, ಹೊಂಗೂರು.

ಪುಡ್‌ಲಾಂಡ್ 11-9-64 ರಿಂದ
ಶಿ ಸ್ಸು ಅಮೋಘ ಆರಂಭ

.... ಎ. ವಿ ಎಂ. ರವರ ಅತ್ಯಮೋಘ ಹಿಂದಿ ಚಿತ್ರ ....

ಪೂಜಾ ಕೆ ಫೂಲ್

ತಾರಾಗಣ– ಅಶೋಕಕುಮಾರ್, ವೂಜಂತಿ ಸಿನ್ಹಾ, ನಿಮ್ಮಿ, ಧರ್ಮೇಂದ್ರ, ಪ್ರಾಣ್

[ದಿನವಹಿ 3 ಪ್ರದರ್ಶನಗಳು]

ಅಪೆರಾ— ಜನಪ್ರಿಯ 2 ನೇ ವಾರ

ಅತ್ಯಮೋಘ ಕನ್ನಡ ಚಿತ್ರ [ದಿನ 3 ಆಟಗಳು]

ನತಿ ಶಕ್ತಿ

ಪಾತ್ರಧಾರಿಗಳು— ರಾಜಕುಮಾರ್, ಪ್ರಾಹುಕಾರ್ ಜಾನಕಿ, ರಾಜಮ್ಮ

SHAKTI
SUDHA

Superb Tonic

Help The ' Gorakshana'

" ಗೋರಕ್ಷಣ " ಕ್ಕೆ ಬೆಂಬೆಲಿಗರಾಗಿರಿ

ಕನ್ನಡನಾಡಿನಲ್ಲಿ ಗೋಂಕ್ಷಣೆ, ಪ್ರಾಣಿದಯೆ, ಶಾಕಾಹಾರ, ಪಶುವೈದ್ಯ ವಿಚಾರಗಳಿಂದ ಕೂಡಿದ ಏಕೈಕ ಮಾಸಪತ್ರಿಕೆ.

' ಗೋರಕ್ಷಣ ' ಕ್ಕೆ ಸಹಾಯದ್ರವ್ಯವನ್ನೂ, ಲೇಖನಗಳನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ವಾರ್ಷಿಕ ಚಂದಾ 50 ನ ಪೈ

ಅಭಿವೃದ್ಧಿಗಳು ರೂ 10 (ಒಂದೇ ಸ್ಥಾರಿ) ಸಹಾಯಕರು ರೂ 25 (ಒಂದೇ ಸಾರಿ)

ವಿಳಾಸ- ಗೋರಕ್ಷಣ ಆಫೀಸು ಚಾಮುಂಡಿಪುರಂ, ಮೈಸೂರು 4

ಚಂದಾ ವಾಯಿದೆ ಮುಗಿದಿರುವವರು ದಯವಿಟ್ಟು ಪತ್ರವ್ಯವಹಾರ ಮಾಡಬೇಕಾಗಿ ವಿನಂತಿ ; ಅಭಿವೃದ್ಧಿಗಳೂ, ಸಹಾಯಕರೂ ಆಗಿ ಹೆಚ್ಚೆಚ್ಚು ಮಂದಿ ನೆರವು ನೀಡಿ ಈ ಪವಿತ್ರ ಕಾರ್ಯವು ಹೆಚ್ಚೆಚ್ಚು ಪ್ರಚಾರವಾಗಲೂ ಸಹಕರಿಸಬೇಕೆಂದು ವಿನಂತಿ ; ಇವರ ಹೆಸರು ಆಗಾಗ್ಗೆ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.

Edited, Printed & Published by the Proprietor Dharma Prachara Nirata M. S. Krishna Rao at the Satyavadi Press, Chamarajapuram, Mysore 4